ANNEXURE -2

Details of works taken in Bhalki taluk under Hyderabad Karnataka Development Board

	Sector	1999-2000		2000-2001	
		No. of Works	Expenditure (Rs. lakhs)	No. of Works	Allocation (Rs. lakhs)
1.	Roads & Bridges	44	217.67	28	43.11
2.	Health	1	2.50	-	-
3.	School Buildings	3	7.00	1	1.80
4.	Water Supply	1	0.70	1	1.10
5.	Social Welfare	1	-	2	1.60
6.	Rural Electrification	2	-	2	2.75
7.	Others	30	36.50	11	6.18
	Total	**82**	**264.37**	**45**	**56.57**

ಹೆದ್ದಾರಿಗಳ ರಸ್ತೆ ಬದಿಯಲ್ಲಿರುವ ಡಾಬಾ ಹೋಟೆಲ್‌ಗಳು

4983 - ಶ್ರೀ ಎ. ರಾಮದಾಸ್ (ಕೃಷ್ಣರಾಜ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿಗಳ ರಸ್ತೆಯ ಬದಿಯಲ್ಲಿರುವ ಡಾಬಾ ಹೋಟೆಲ್, ರೆಸ್ಟೋರೆಂಟ್‌ಗಳ ಸಂಖ್ಯೆ ಎಷ್ಟು?

ಆ) ಈ ಡಾಬಾ ಹೋಟೆಲ್‌ಗಳನ್ನು ಪರವಾನಗಿ ಪಡೆದು ನಡೆಸಲಾಗುತ್ತಿದೆಯೇ? ಪಡೆದಿದ್ದರೆ ಯಾರಿಂದ ಪಡೆಯಲಾಗಿದೆ?

ಇ) ಈ ಡಾಬಾ, ಹೋಟೆಲ್‌ಗಳಲ್ಲಿ ಲಿಕ್ಕರ್‌ಗಳ ಸರಬರಾಜು ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಅಪಘಾತಗಳಿಗೆ ಮೂಲ ಕಾರಣವಾಗಿರುವ ಈ ಮಾದಕ ಪಾನೀಯಗಳ ಸರಬರಾಜು ವ್ಯವಸ್ಥೆ ನಿಯಂತ್ರಿಸಲು ಸರ್ಕಾರವು ತೆಗೆದುಕೊಳ್ಳುವ ಕ್ರಮಗಳೇನು?

ಈ) ಈ ಡಾಬಾಗಳು ರಸ್ತೆಯ ಮಧ್ಯಭಾಗದಿಂದ ಎಷ್ಟು ಮೀಟರ್ ದೂರದ ಒಳಗೆ ಇರಬಾರದೆಂದು ಕಾನೂನಿನಲ್ಲಿ ತಿಳಿಸಲಾಗಿದೆ? ಈ ನಿಯಂತ್ರಿತ ಪ್ರದೇಶದ ಒಳಗೆ ಇರುವ ಡಾಬಾಗಳನ್ನು ತೆರವು ಮಾಡಿಸುವ ಬಗ್ಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಉ) ಮೈಸೂರು-ಬೆಂಗಳೂರು ಹೆದ್ದಾರಿಯಲ್ಲಿ ಕಳೆದ 3 ವರ್ಷಗಳಿಂದ ಎಷ್ಟು ಡಾಬಾಗಳು ಸೃಷ್ಟಿಯಾಗಿವೆ?

ಶ್ರೀ ಧರಮ್ ಸಿಂಗ್ (ಲೋಕೋಪಯೋಗಿ ಸಚಿವರು) :

ಅ) ರಾಷ್ಟ್ರೀಯ ಹೆದ್ದಾರಿಗಳ ಇಕ್ಕೆಲಗಳಲ್ಲಿ ಸುಮಾರು 500 ಸಂಖ್ಯೆ ಮತ್ತು ರಾಜ್ಯ ಹೆದ್ದಾರಿಯ ಇಕ್ಕೆಲಗಳಲ್ಲಿ ಸುಮಾರು 1286 ಡಾಬಾ ಹೋಟೆಲ್, ರೆಸ್ಟೋರೆಂಟ್‌ಗಳಿವೆ.

ಆ) ಲೋಕೋಪಯೋಗಿ ಇಲಾಖೆಯಿಂದ ಈವರೆವಿಗೂ ರಸ್ತೆ ಬದಿಯಲ್ಲಿ ಯಾವುದೇ ಡಾಬಾ ಹೋಟೆಲ್‌ಗಳನ್ನು ನಡೆಸಲು ಪರವಾನಗಿ ನೀಡಿರುವುದಿಲ್ಲ.

ಇ) ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟಿರುವುದಿಲ್ಲ.

ಈ) ಐ.ಆರ್.ಸಿ. ನಿಯಮಗಳಂತೆ ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳಿಗೆ ನಿಯಂತ್ರಣ ರೇಖೆ ಮತ್ತು ಕಟ್ಟಡ ರೇಖೆ ರಸ್ತೆ ಮಧ್ಯ ಭಾಗದಿಂದ ಕ್ರಮವಾಗಿ 75 ಮಿ. ಮತ್ತು 40 ಮೀ. ಎಂದು ನಿಗಧಿಪಡಿಸಿದೆ. ಕರ್ನಾಟಕ ರಾಜ್ಯ ಹೆದ್ದಾರಿ ಅಧಿನಿಯಮವು 7ರನ್ವಯ ಸಾರ್ವಜನಿಕರಿಂದ ಆಕ್ಷೇಪಣೆಯನ್ನು ಕರೆಯಲಾಗಿದೆ ಮತ್ತು (8) ರನ್ವಯ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಅನಧಿಕೃತ ಕಟ್ಟಡಗಳು ಇದ್ದಲ್ಲಿ ತೆರವು ಮಾಡುವಂತೆ ಸಂಬಂಧಪಟ್ಟವರಿಗೆ ನೋಟೀಸ್‌ಗಳನ್ನು ನಿಯಮಾನುಸಾರ ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಉ) ಮೈಸೂರು-ಬೆಂಗಳೂರು ಹೆದ್ದಾರಿಯಲ್ಲಿ ಒಟ್ಟು 16 ಡಾಬಾಗಳು ಇರುತ್ತವೆ.

ಪತ್ರಿಕೆಗಳ ಜಾಹಿರಾತು ದರ ಪರಿಷ್ಕರಣೆ ಮಾಡಿರುವುದರಿಂದ ಆಗಿರುವ ತಾರತಮ್ಯ

4984 - ಶ್ರೀ ಎ. ರಾಮದಾಸ್ (ಕೃಷ್ಣರಾಜ) : ಮಾನ್ಯ ವಾರ್ತಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪತ್ರಿಕೆಗಳ ಜಾಹಿರಾತುಗಳ ದರ ಪರಿಷ್ಕರಣೆ ಮಾಡಲು ಸರ್ಕಾರ ನಿರ್ಧರಿಸಿದೆಯೇ? ಎಂದು ಈ ಪ್ರಕಟಣೆ ನೀಡಲಾಗಿದೆ ಮತ್ತು ಎಂದಿನಿಂದ ಜಾರಿಗೆ ಬಂದಿದೆ?

ಆ) ಪತ್ರಿಕೆಗಳು ಎಷ್ಟು ಸರ್ಕ್ಯೂಲೇಷನ್ ಇದೆ ಎಂದು ಯಾವ ಮಾನದಂಡದ ಆಧಾರದ ಮೇಲೆ ನಿರ್ಧರಿಸಲಾಗುತ್ತಿದೆ?

ಇ) ಮೈಸೂರಿನಲ್ಲಿ ಪತ್ರಿಕೆಗಳಿಗೆ ಈ ಮೊದಲು ಇದ್ದ ದರ ಎಷ್ಟು? ಎಷ್ಟು ಸರ್ಕ್ಯೂಲೇಷನ್ ಇದೆ ಪರಿಷ್ಕರಣೆಯಾದ ನಂತರ ದರ ಎಷ್ಟು?

ಈ) ತಾರತಮ್ಯವೇನಾದರೂ ಇರುವ ಬಗ್ಗೆ ದೂರು ಬಂದಿದೆಯೇ? ಹಾಗಿದ್ದಲ್ಲಿ ಇದನ್ನು ಸರಿಮಾಡಲು ಕೈಗೊಂಡಿರುವ ಕ್ರಮಗಳು ಯಾವುವು?

ಪ್ರೊ|| ಬಿ.ಕೆ. ಚಂದ್ರಶೇಖರ್ (ವಾರ್ತಾ ಸಚಿವರು) :